ಆ ಬಡ ಮನುಷ್ಯನಿಗೆ ೨ನೇ ಜೂನ್ ೧೯೭೨ ರಂದು ನೋಟೀಸ್ ಕೊಟ್ಟು ೩ನೇ ಜೂನ್ ೧೯೭೨ ರಂದು ಆ ಪೆಡ್ಡನ್ನು ಡೆಮಾಲಿಷ್ ಮಾಡಿದ್ದಾರೆ. ಇದಕ್ಕೆ ಕಾರಣ ಆ ಮನೆಯ ಪಕ್ಕದಲ್ಲಿ ಮುಸ್ಲಿಮರ ಗೋರಿ ಇರುವ ಪ್ರಯುಕ್ತ ಯಾವ ಮನೆಗಳು ಆ ಗೋರಿಯ ಪಕ್ಕದಲ್ಲಿ ಇರಬಾರದು ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದಾರೆ ಈ ವಿಚಾರ ಶ್ರೀಮಾನ್ ಬಸವಲಿಂಗಪ್ಪನವರಿಗೆ ಗೊತ್ತಿದ್ದರೂ ಅವರು ಆ ದಿವಸ ಊರಿನಲ್ಲಿ ಇದ್ದರೂ ಕೂಡ ಸಾರಿಗೆ ಶಾಖೆಯ ಮಂತ್ರಿಗಳು ದೂರವಾಣಿಯ ಮೂಲಕ ಆ ಪೆಡ್ಡನ್ನು ಒಡೆಯುವುದಕ್ಕೆ ಚನ್ನಪಟ್ಟಣ ಪುರಸಭಾ ಆಡಳಿತಗಾರರಿಗೆ ಏತಕ್ಕೆ ಆದೇಶವನ್ನು ಕೊಟ್ಟಿದ್ದಾರೆ ? ಈ ವಿಚಾರದಲ್ಲಿ ಸಾರಿಗೆ ಮಂತ್ರಿಗಳು ಪ್ರವೇಶ ಮಾಡುವುದಕ್ಕೆ ಅವರಿಗೂ ಇದಕ್ಕೂ ಏನು ಸಂಬಂಧ ಇದೆ ?

ಶ್ರೀ ಬಿ. ಬಸವಲಿಂಗಪ್ಪ.—ಸಾರಿಗೆ ಇಲಾಖೆಯ ಮಂತ್ರಿಗಳು ಮಂತ್ರಿಮಂಡಲಕ್ಕೆ ಸಂಬಂಧಪಟ್ಟ, ಹಾಗೆ ಕ್ರಮತೆಗೆದುಕೊಳ್ಳುವುದು ಜಂಟಿ ಜವಾಬ್ದಾರಿಯ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಆ ದಿವಸ ಊರಿನಲ್ಲಿ ಇದ್ದನೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಅಕ್ರಮವಾಗಿ ಮನೆಯನ್ನು ಕಟ್ಟುತ್ತಿದ್ದಾರೆ ಎಂದು ಸಾರಿಗೆ ಮಂತ್ರಿಗಳಿಗೆ ದೂರು ಬಂದಾಗ ಅವರು ಫೋನ್ ಮುಖಾಂತರ ಕ್ರಮ ತೆಗೆದುಕೊಂಡಿದ್ದಾರೆ.

DROUGHT STRICKEN AREAS IN SHIMOGA TALUK

791. SRI S. M. SHEERANALY CHANDRASHEKAR (Hosanagar).—

Will the Minister for Revenue be pleased to state :—

the reasons for the delay in declaring about seventyfour villages of Shimoga taluk as drought striken areas ?

SRI N. HUTCHAMASTHY GOWDA (Minister for Revenue).—

As the Seasonal Conditions in Shimoga taluk covering 74 villages were good during the year 1971-72 there was no necessity to declare that area as drought stricken.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ.—ತಾವು ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ೧೯೭೧-೭೨ನೇ ಸಾಲಿನಲ್ಲಿ ಶಿವಮೊಗ್ಗ ತಾಲ್ಲೂಕಿನ ೭೪ ಗ್ರಾಮಗಳನ್ನು ಒಳಗೊಂಡ ಪ್ರದೇಶದಲ್ಲಿ ಋತು ಮಾನ ಪರಿಸ್ಥಿತಿಯು ಚೆನ್ನಾಗಿದ್ದುದರಿಂದ ಸದರಿ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಅವಶ್ಯಕತೆ ಕಂಡುಬರಲಿಲ್ಲ ಎಂದು ಹೇಳಿದ್ದೀರಿ, ಹೋದ ವರ್ಷ ಈ ಪ್ರದೇಶವನ್ನು ಬರಗಾಲ ಪ್ರದೇಶವೆಂದು ಸರ್ಕಾರದವರು ಒಪ್ಪಿಕೊಂಡಿದ್ದರೆ. ಈ ವರ್ಷ ಜೂನ್ ಮತ್ತು ಜುಲೈ ತಿಂಗಳಲ್ಲಿ ಇಲ್ಲಿ ಮಳೆ ಆಗಿಲ್ಲ, ಆದ್ದರಿಂದ ಅಲ್ಲಿ ಬರಗಾಲ ಪರಿಸ್ಥಿತಿ ಇದೆಂಬುದು ಗೊತ್ತಿದೆಯೆ?

†ಶ್ರೀ ಎನ್. ಹುಚ್ಚಮಾಸ್ತಿ ಗೌಡ.— ಮಾನ್ಯ ಸದಸ್ಯರು ಯಾವ ವರ್ಷಕ್ಕೆ ಎನ್ನುವ ವಿಷಯವನ್ನು ಪ್ರಶ್ನೆಯಲ್ಲಿ ಕೇಳಿದಿದ್ದರೂ ಕೂಡ ನಾವು ಅವರ ಪ್ರಶ್ನೆಗೆ ಉತ್ತರವನ್ನು ಒದಗಿಸಬೇಕು ಎಂದು ಮನಸ್ಸು ಮಾಡಿ ಉತ್ತರವನ್ನು ಒದಗಿಸಿದ್ದೇವೆ. ೧೯೭೦-೭೧ನೇ ಇಸವಿಯಲ್ಲಿ ಮಾತ್ರ ಆ ಪ್ರದೇಶದಲ್ಲಿ ೪೭ ಗ್ರಾಮಗಳಲ್ಲಿ ಬೆಳೆ ಆಗಿಲ್ಲ ಎಂದು ೧೪೫೯ ರೂಪಾಯಿಗಳ ಕಂದಾಯವನ್ನು ರಿಮಿಷನ್ ಮಾಡಿದೆ ಮತ್ತು ಅಲ್ಲಿ ೩೫೪೦ ಕೆಲಸಗಳನ್ನು ಮಾಡಿದ್ದೇವೆ ಈ ವರ್ಷ ಅಲ್ಲಿ ಕಂದಾಯವನ್ನು ರಿಮಿಷನ್ ಮಾಡುವುದಕ್ಕೆ ಆದಕ್ಕೆ ಸಂಬಂಧಪಟ್ಟಂತೆ ಯಾವ ಒಂದು ಮಿತಿ ಇದೆಯೋ ಆ ಮಿತಿಗಿಂತ ಮೇಲ್ಪಟ್ಟು ಅಲ್ಲಿ ಬೆಳೆ ಆಗಿರುವುದರಿಂದ ಕಂದಾಯವನ್ನು ರಿಮಿಷನ್ ಮಾಡತಕ್ಕ ಪರಿಸ್ಥಿತಿ ಒದಗಲಿಲ್ಲ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ.—ಈ ವರ್ಷ ಕೂಡ ಹಿಂದಿನ ವರ್ಷದಂತೆ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಮಳೆ ಬಾದೇ ಇಲ್ಲ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಈ ಅಧಿವೇಶನ ಮುಗಿದ ಮೇಲೆ ತಾವು ಆ ಪ್ರದೇಶಕ್ಕೆ ಬಂದು ನೋಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ಆದಷ್ಟು ಜಾಗ್ರತ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಆ ಬಗ್ಗೆ ಮುಂದಿನ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ೭ಳರಲ್ಲಿ ಪ್ರದೇಶಗಳೂ ಕ್ಷಾಮಪೀಡಿತವಾಗಿದೆ ಎನ್ನುವ ಬಗ್ಗೆ ಶಿವಮೊಗ್ಗ ತಾಲ್ಲೂಕು ಬೋರ್ಡಿನವರು ಒಂದು ನಿರ್ಣಯವನ್ನು ಮಾಡಿ ತಮಗೆ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ನನಗೆ ಬಂದಿಲ್ಲ. ಸಾಮಾನ್ಯವಾಗಿ ಶಿವಮೊಗ್ಗ ಜಿಲ್ಲೆ ಮಲೆನಾಡು ಪ್ರದೇಶವಾದರೂ ಆ ೭ಳ. ಗ್ರಾಮಗಳಲ್ಲಿ ಆಗಿಂದಾಗ್ಗೆ ತೊಂದರೆ ಆಗತಕ್ಕಂಥಾ ಸಂದರ್ಭ ಇದೆ ಎನ್ನುವ ವಿಷಯಮಾತ್ರ ಗೊತ್ತು.

ಶ್ರೀ ಕೆ. ಯಂಕಪ್ಪ.—ಈಗ ಎರಡು ಮೂರು ವರ್ಷಗಳಿಂದಲೂ ಆ ೭ಳ ಹಳ್ಳಿಗಳಲ್ಲಿ ಇದೇ ರೀತಿ ಪರಿಸ್ಥಿತಿ ಇದ್ದರೂ ಕೂಡ ಅದು ಏತಕ್ಕೆ ತಮ್ಮ ಗಮನಕ್ಕೆ ಬರಲಿಲ್ಲ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ವರ್ಷ ಏನಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಈ ವರ್ಷ ಪರಿಸ್ಥಿತಿ ಏನಾಗಿದೆ ಎಂದರೆ ಇಲ್ಲಿರತಕ್ಕ ಅಂಕಿ ಅಂಶಗಳ ಪ್ರಕಾರ ಕಂದಾಯವನ್ನು ರಿಮಿಷನ್ ಮಾಡಬೇಕಾದರೆ ಬೆಳೆ ೨೫ ಪರ್ಸಂಟ್ ಇರಬೇಕು. ಕಂದಾಯವನ್ನು ಸಸ್ಪೆಂಡ್ ಮಾಡಬೇಕಾದರೆ ಬೆಳೆ ೩೭ ಪರ್ಸೆಂಟ್ ಇರಬೇಕು. ಈಗ ನಮಗೆ ಬಂದಿರುವ ವರದಿಯ ಪ್ರಕಾರ ಈ ವರ್ಷ ಆಲ್ಲಿ ೩೭ ಪರ್ಸೆಂಟಿಗಿಂತ ಹೆಚ್ಚು ಬೆಳೆಯಾಗಿದೆ ಎಂದು ಗೊತ್ತಾಗಿದೆ

ಶ್ರೀ ಎನ್. ಜಿ. ಹಾಲಪ್ಪ.—ಈಗ ಮಲೆನಾಡಿನಲ್ಲಿ ರೈನ್ ಫಾಡೋ ಏರಿಯಾದಲ್ಲಿ ಮಳೆ ಆಗುತ್ತಾ ಇಲ್ಲ. ಹೀಗಿರುವಾಗ ವಿಲೇಜ್ ಅಕೌಂಟೆಂಟರು ಎಷ್ಟು ಬೆಳೆ ಆಗಿದೆ ಎಂದು ವರದಿ ಮಾಡುತ್ತಾರೆಯೋ ಅದನ್ನೇ ಸರ್ಕಾರದವರು ಗಣನೆಗೆ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಲೇಜ್ ಅಕೌಂಟೆಂಟರು ಏನು ವರದಿಯನ್ನು ಕೊಡುತ್ತಾರೆಯೋ ಅದೇ ನಿಲ್ಲುವುದಿಲ್ಲ ಅವರು ಕೊಟ್ಟಿರುವುದು ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಆಯಾ ಸಂಬಂಧಪಟ್ಟ ತಹಶೀಲ್ದಾರರು, ಸಬ್‌ಡಿವಿಜನ್ ಆಫೀಸರು, ಮತ್ತು ಡೆಪ್ಯುಟಿ ಕಮಿಷನರು ಆ ಸ್ಥಳಕ್ಕೆ ಹೋಗಿ ಟೆಸ್ಟ್ ಮಾಡಿ ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡಿ ಬೆಳೆಯನ್ನು ನಿರ್ಧಾರ ಮಾಡುತ್ತಾರೆ.

SERVICE CENTRES OF AGRO INDUSTRIES CORPORATION IN SOUTH KANARA

865. Sri A. G. Kodgi (Baindur).—

Will the Minister for Agriculture and Forests be pleased to state.—

whether it has come to the notice of the Government that the Agro Industries Corporation has not set up any service Centres in South Kanara ?

Sri K. H. Patil (Minister for Agriculture and Forests).—

No.

ಶ್ರೀ ಎ. ಜಿ. ಕೊಡಗಿ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಕೃಷಿ ಕೈಗಾರಿಕಾ ಸಂಸ್ಥೆಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇವಾ ಸಹಕಾರ ಕೇಂದ್ರಗಳನ್ನೇನೂ ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ, ಆದರಲ್ಲಿ ಯಾವುದು ತಮ್ಮ ಗಮನಕ್ಕೆ ಬಂದಿಲ್ಲ ಎಂಬುದನ್ನು ಹೇಳುತ್ತೀರಾ ?

†ಶ್ರೀ ಕೆ. ಎಚ್. ಪಾಟೀಲ್.—ಅಲ್ಲಿ ಕೃಷಿ ಕೈಗಾರಿಕಾ ಸಂಸ್ಥೆಯವರ ಸೇವಾ ಕೇಂದ್ರಗಳು ಇರುವುದು ನಮ್ಮ ಗಮನಕ್ಕೆ ಬಂದಿಲ್ಲ.